REHABILITATION OF PEOPLE AFFECTED DUE TO HEMAVATHI CHANNEL

800 SRI H. C. SRIKANTAIAH (Sravanabelagola) .—

Will the Minister for Revenue be plased to state :—

(*a*) whether they have received representations from people whose lands are submerged under the Hemavathi Channel in Channarapapatna Taluk, Hassan District ;

(*b*) if so, whether there is any proposal to rehabilitate such people on the line similar to rehabilitation of people under Hemavathy Scheme ?

SRI N. HULCHAMASTHY GOWDA (Minister for Revenue) .—

(*a*) Some representations have been made that persons whose lands are acquired for the channels of Hemavathi Reservoir Project should also be given exchange lands.

(*b*) The proposal to consider grant of land to those who lose lands on account of excavation of the channels of the Hemavathi Project in Holenarasipur, Channarayapatna, Hassan and Arakalgud Taluks, will be considered by the rehabilitation Committee of the Hemavathi Project at its next meeting.

ಶ್ರೀ ಎಚ್. ಸಿ. ಶ್ರೀಕಂಠಯ್ಯ : ಸ್ವಾಮಿ, ತಾವು ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಪ್ರವಾಸ ಮಾಡಿದಾಗ ಅನೇಕ ಜನ ರೈತರು ತಮಗೆ ಮನವಿಯನ್ನು ಸಲ್ಲಿಸಿದರು. ಹೇಮಾವತಿ ಪ್ರಾಜೆಕ್ಟ್‌ನಿಂದ ಮುಳುಗಡೆ ಆಗತಕ್ಕಂಥ ಪ್ರದೇಶಗಳ ರೈತರಿಗೆ ಯಾವರೀತಿಯಾಗಿ ಸೌಲಭ್ಯವನ್ನು ಒದಗಿಸಿದ್ದೀರೋ ಅದೇ ರೀತಿ ಸುಮಾರು ೨೫೦—೩೦೦ ಅಡಿ ನಾಲೆ ಹೋಗಿರತಕ್ಕಂಥ ಕಡೆಗಳಲ್ಲಿ ಅನೇಕ ಸಂಸಾರಗಳು ಪೂರ್ತಿ ಜಮೀನು ಕಳೆದುಕೊಂಡಿರತಕ್ಕವರಿಗೂ ಕೂಡ ಅದೇ ಸೌಲಭ್ಯವನ್ನು ಒದಗಿಸುತ್ತೀವೆ ಎಂಬುದಾಗಿ ತಿಳಿಸುತ್ತೀರಾ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ : ಹೇಮಾವತಿ ರಿಸರ್ವಾಯರ್‌ನಿಂದ ಮುಳುಗಡೆ ಆಗತಕ್ಕಂಥ ಪ್ರದೇಶದಲ್ಲಿ ಪೂರ್ತಿ ಜಮೀನು ಕಳೆದುಕೊಂಡವರಿಗೆ ಜಮೀನು ಒದಗಿಸತಕ್ಕಂಥ ಒಂದು ನೀತಿ ಇದೆ. ಅದೇ ರೀತಿ ನಾಲೆಗಳ ಕೆಳಗಡೆ ಇರತಕ್ಕ ರೈತರುಗಳಂ ಪೂರ್ತಿ ಜಮೀನುಗಳನ್ನು ಕಳೆದುಕೊಂಡಂಥವರಿಗೆ ಪೂರ್ತಿ ಜಮೀನಂ ಕೊಡಬೇಕೆಂದು ಇತ್ತೀಚೆಗೆ ತೀರ್ಮಾನವಾಗಿದೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ : ಹಾಗೆಯೇ ಇದರ ಬಗ್ಗೆ ಪುನರ್ವಸತಿ ಸಮಿತಿಯು ಶಿಫಾರಸು ಮಾಡುವುದಕ್ಕೆ ಆದೇಶ ಕೊಡುವುದಕ್ಕೆ ಸಾಧ್ಯವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಈಗಾಗಲೇ ಅದರ ಬಗ್ಗೆ ಶಿಫಾರಸು ಮಾಡಂವಂತೆ ಆದೇಶ ಕೊಡಲಾಗಿದೆ. ಹಾಗೆಯೇ ನಾಲೆಗಳ ಕೆಳಗಡೆ ಇರತಕ್ಕಂಥಾವರಿಗೂ ಜಮೀನು ಕಳೆದುಕೊಂಡವರಿಗೆ ಜಮೀನನ್ನು ಕೊಡಬೇಕು ಎನ್ನುವ ಒಂದು ವ್ಯವಸ್ಥೆ ಮಾಡಬೇಕಂ ಎಂದು ತಿಳಿಸಿದ್ದೇವೆ.

ಶ್ರೀ ಕೆ ಹೆಚ್. ಹನುಮೇಗೌಡ : ಸ್ವಾಮಿ, ನಾಲೆ ಕೆಳಗಡೆ ಇರತಕ್ಕಂಥ ಜಮೀನುಗಳನ್ನು ಕಳೆದು ಕೊಂಡಂಥ ರೈತರಿಗೆ ಯಾವುದೋ ಜೇವೆ ಗುಡ್ಡದ ಹತ್ತಿರ ಇರುವ ಜಮೀನುಗಳನ್ನು ಕೊಡದೇ ಮಳೆ ಆಧಾರದ ಮೇಲೆ ಇರತಕ್ಕಂಥಾ ಪ್ರದೇಶದಲ್ಲಾಗಲಿ ಅಥವಾ ನೀರಾವರಿ ಆಗತಕ್ಕಂಥ ಪ್ರದೇಶದಲ್ಲಿ ಆಗಲಿ ಜಮೀನು ಕೊಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ನಾಲೆ ಕೆಳಗಡೆ ಸರ್ಕಾರಿ ಜಮೀನು ಇದ್ದರೆ ಅದರಲ್ಲಿ ಸ್ವಲ್ಪ ಮಟ್ಟಿಗೆ ಮುಳುಗಡೆ ಆಗಿರತಕ್ಕಂಥ ಜನರಿಗೆ ಕೊಡಬೇಕೆಂದು ತೀರ್ಮಾನ ಮಾಡಿಕೊಂಡಿದ್ದೇವೆ.

(*e*) whether Government intend to make arrangements to purchase the medicines of day to-day use from various companies instead of from only one Company?

SRI V. CHIKKE GOWDA.—Ministsr of State for Animal Husbandry

(*a*) It has come to the notice that adequate medicine is no supplied.

(*b*) Yes

(*c*) No considerable amount was lapsed so far out of the sanctioned amount in the estimates. So no action has been taken in the matter.

(*d*) Last year i.e. during 1971-72, medicines costing Rs. 6'678 85 only had been purchased from I.C.I Company. The medicine purchased so far are of essential use and are being utilised in all th hospitals.

(*e*) Yes. In the same manner, the medicines were purchased from the following companies during the year 1971-72.—

(1) Fizer Company
(2) Sarabhai Company
(3) I.C.I. Company
(4) Smith Clive and Company
(5) Hexite and Company
(6) Pure Pharma and Company
(7) Unity Pharms and Company
(8) Mysore Industrial Testing Laboratory

ಶ್ರೀ ಗಟ್ಟಿಚಂದ್ರಶೇಖರ್ — (ಆ) ಪ್ರಶ್ನೆಗೆ ಉತ್ತರವಾಗಿ ದನಗಳ ಆಸ್ಪತ್ರೆಗಳಿಗೆ ಬೇಕಾದ ಔಷಧಿ ಸರಬರಾಜು ಮಾಡುವುದು ಗಮನಕ್ಕೆ ಬಂದಿದೆ ಎಂದು ತಿಳಿಸಲಾಗಿದೆ. ಹಾಗಿದ್ದಮೇಲೆ ಬೇಕಾದ ಔಷಧಿ ಸರಬರಾಜು ಮಾಡಲು ವ್ಯವಸೆ ಮಾಡುವಿರಾ?

ಶ್ರೀ ಎನ್. ಚಿಕ್ಕೇಗೌಡ.—ಈ ವರ್ಷ ೨೦ ಲಕ್ಷ ರೂಪಾಯಿಗಳ ಔಷಧಿ ಸರಬರಾಜು ಮಾಡಬೇಕೆಂದು ಬಜೆಟ್ಟಿನಲ್ಲಿ ಹಣ ಒದಗಿಸಲಾಗಿದೆ. ಈಗಾಗಲೆ ಇಂಡಸ್ಟ್ರಿಯಲ್ ಟೆಸ್ಟಿಂಗ್ ಲ್ಯಾಬೋರೇಟರಿಯಿಂದ ಸರಬರಾಯಿಮಾಡಲು ಏರ್ಪಾಡುಮಾಡಿದ್ದೇವೆ. ಬೇರೆ ಪೇಟೆಂಗ್ ಡ್ರಗ್ಸ್ ತರಿಸಲು ಸೂಕ್ಕ ಕ್ರಮ ತೆಗೆದು ಕೊಳ್ಳುತ್ತೇವೆ. ಸೂಕ್ತ ಏರ್ಪಾಡುಮಾಡಿ ಸಕಾಲದಲ್ಲಿ ಔಷಧಿ ಸರಬರಾಯಿಮಾಡಲು ವ್ಯವಸ್ಥೆಮಾಡುತ್ತೇವೆ.

ಶ್ರೀ ಗಟ್ಟಿಚಂದ್ರಶೇಖರ್.—೨೦-೩೦ ವರ್ಷಗಳಿಂದ ಸೂಜಿ, ದಬ್ಬಳ, ಸ್ಟಾವ್ ಮುಂತಾದುವು ಸರ್ಕಾರದಿಂದ ಏನೂ ಸರಬರಾಯಾಗಿವೆ ಅವನ್ನು ಅಧಿಕಾರಿಗಳು ಆಸ್ಪತ್ರೆಗಳಿಗೆ ಕೊಡದೆ ಮನೆಗಳಿಗೆ ಸಾಗಿಸಿದ್ದಾರೆ. ಇದನ್ನು ವಿಚಾರಿಸುತ್ತಿರಾ?

ಶ್ರೀ ಎನ್. ಚಿಕ್ಕೇಗೌಡ.—ಕಳೆದ ವರ್ಷ ಬಜೆಟ್ಟಿನಲ್ಲಿ ೨೦ ಲಕ್ಷ ಹಣ ಒದಗಿಸಿತ್ತು, ಅದರಲ್ಲಿ ೧,೩೬,೩೪೭ ರೂಪಾಯಿ ಖರ್ಚಾಗಿದೆ ಆಗ ಎಕಾನಮಿ ಮೆಷರ್ಸ್ ಬಂದುಸೇಕಡ ೧೦ ಭಾಗ ಅಂದರೆ ೫ ಲಕ್ಷದ ೫೩ ಸಾವಿರ ರೂಪಾಯಿ ವಾಪಸು ಬಂತು, ಉಳಿ ಸಾವಿರ ರೂಪಾಯಿ ಸೇವಿಂಗ್ಸ್ ಆಗಿದೆ. ಕಳೆದ ವರ್ಷದ ಕೊನೆಯಲ್ಲಿ ಎಕಾನಮಿ ಮೆಷರ್ಸ್ ಬಂದುದರಿಂದ ಮತ್ತು ಮಂಜೂರಾತಿ ದೊರೆಯದೆ ಕೊಂಡುಕೊಳ್ಳಲ್ಲಿಲ್ಲ. ಆದರೆ ಆಸ್ಪತ್ರೆಗಳಿಗೆ ಸರಿಯಾದ ಸಲಕರಣೆ ಕೊಡಬೇಕೆಂಬ ವಿಚಾರವಿದೆ. ಹೊಸ ಸಲಕರಣೆಗಳನ್ನು ಕೊಡಲು ಏರ್ಪಾಡುಮಾಡುತ್ತೇವೆ.